ಶ್ರೀ ಬಿ. ಎಸ್. ಜವಾಣ್ : ಸನ್ಮಾನ್ಯ ಅಧ್ಯಕ್ಷರೆ ಐ ಆರ್.ಡಿ.ಪಿ. ಸಾಲ ಬಡವರಿಗೆ ಸರಿಯಾಗಿ ಮುಟ್ಟುತ್ತಿಲ್ಲ. ಮಂಡಲ ಪ್ರಧಾನರು ಸ್ವಂತ ಬಾಧು ಬಳಗ ದವರಿಗೆ ಮಾತ್ರ ಸಾಲ ಕೊಡಿಸುತ್ತಿದ್ದಾರೆ ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತಿದೆ ? ರಿಲೇಷನ್ಸ್‌ಗೆ ಕೊಡದಂತೆ ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆಯೇ ? ಅಥವಾ ಅವರ ಮನಬಂದಂತೆ ಸಾಲ ಕೊಡುವುದಕ್ಕೆ ಅವಕಾಶ ಕೊಡುತ್ತಿದ್ದಾರಾ ? ಅಥವಾ ರಿಸ್ಟ್ರಿಕ್ಷನ್ಸ್ ಹಾಕಿ ಬಡವರಿಗೆ ಸಾಲ ಕೊಡಿಸುತ್ತಾರೆಯೇ ? ಇದು ಒಂದು. ಎರಡನೆಯದಾಗಿ ಭೂಮಿ ಆಸ್ತಿ ಯಾರಿಗಿದೆಯೋ ಅಂಥವರಿಗೆ ಸಾಲ ಕೊಡುತ್ತಿದ್ದಾರೆ. ನಾನು ಒಂದೆರಡು ಸಾರಿ ಅಲ್ಲಿನ ಪ್ರಧಾನರಿಗೆ ಕೇಳಿದ್ದಕ್ಕೆ ಎಲ್ಲಾ ಸರಿಯಾಗಿ ಕೊಡುತ್ತಿದ್ದೇವೆಂದು ಹಾಗಿಕೆ ಉತ್ತರ ಕೊಟ್ಟರು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ನನ್ನ ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದೇನೆ. ಅಂತಹ ನಿದರ್ಶನಗಳು ಇದ್ದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ ಈಗಿರತಕ್ಕ ಸಾಮಾಜಿಕ ಪದ್ಧತಿ ಪ್ರಕಾರ ಮಂಡಲ ಪಂಚಾಯಿತಿಗಳಲ್ಲಿರತಕ್ಕ ಸ್ಥಿತಿ ಪ್ರಕಾರ ಇದು ಆಗಿದ್ದರೂ ಆಗಿರಬಹುದು. ಅದು ನನ್ನ ಗಮನಕ್ಕೆ ಬಂದಿಲ್ಲ ಅಂತಹ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ಕ್ರಮ ತೆಗೆದುಕೊಳ್ಳುತ್ತೇನೆ. ಮುಂದೆ ನಾವು ಏನು ತಿದ್ದುಪಡಿಯನ್ನು ತರುತ್ತಿದ್ದೇವೆ ಅದನ್ನು ತಂದ ಮೇಲೆ ಇಂತಹ ಪರಿಸ್ಥಿತಿಗೆ ಅವಕಾಶ ಇಲ್ಲ ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಎಸ್. ಜವಾಣ್ : ತಾಲ್ಲೂಕು ಪಂಚಾಯಿತಿ ಸಮಿತಿ ಸಭೆಯಲ್ಲಿ ನಾನು ಪ್ರಧಾನರಿಗೆ ಕೇಳಿದ್ದೇನೆ. ಹೊಲ ಇರುವವರಿಗೆ ಭೂಮಿ ಇರುವವರಿಗೆ ತಮ್ಮ ಮನಸ್ಸಿಗೆ ಬಂದಹಾಗೆ ಮಾಡುತ್ತಿದ್ದೀರಿ ಎಂದು ನಾನು ಸ್ಪೆಸಿಫಿಕ್ಕಾಗಿ ಹೇಳಿದರೂ ಅವರು ಈ ಬಗ್ಗೆ ಗಮನಹರಿಸಿಲ್ಲ. ಆದ್ದರಿಂದ ಈ ಬಗ್ಗೆ ಸರ್ಕಾರ ಕಡಿವಾಣ ಹಾಕ ಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಡೈರೆಕ್ಷನ್ ಕೊಡ ಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಸರ್ವೇ ಸಾಧಾರಣ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಕಡಿವಾಣ ಹಾಕಬೇಕೆಂದು ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮತ್ತೆ ಏನಾದರೂ ನಿರ್ದಿಷ್ಟ ನಿದರ್ಶನಗಳನ್ನು ನನ್ನ ಗಮನಕ್ಕೆ ತಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ಕಳ್ಳಂಬೆಳ್ಳ ಕ್ಷೇತ್ರದ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ.
ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೧೯೯ (೬೫೮)

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

೧) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳ ಸಂಖ್ಯೆ ಎಷ್ಟು ಎಂದು ಪರಿಗಣಿಸಲಾಗಿದೆ ?

೨) ಈ ತೊಂದರೆಯನ್ನು ಬಗೆಹರಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿರುತ್ತದೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರು) : ೧) ೮ ಗ್ರಾಮಗಳು. ೨) ಅಭಾವ ಪರಿಹಾರ ಕಾಮಗಾರಿ ಅಡಿಯಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸಮಸ್ಯಾತ್ಮಕ ಗ್ರಾಮಗಳು ೮ ಎಂದು ಹೇಳಿದ್ದಾರೆ. ಈ ಗ್ರಾಮಗಳು ಯಾವುವು ಹಾಗೂ ಯಾವ ತಾಲೂಕಿನಲ್ಲಿವೆ ಎಂಬುದನ್ನು ತಿಳಿಸಬೇಕು. ಮತ್ತೆ ಎನೇ ಪ್ರಶ್ನೆಗೆ ಅಭಾವ ಪರಿಹಾರ ಕಾಮಗಾರಿ ಅಡಿಯಲ್ಲಿ ಹೆಚ್ಚುವರಿ ಕೊಳವೆ ಬಾವಿಗಳನ್ನು ತೋಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಉತ್ತರಿಸಿದ್ದಾರೆ. ಆದರೆ ನಾನು ಕೇಳುವುದು ಇಷ್ಟೇ. ಇಲ್ಲಿ ಬಾವಿಗಳನ್ನು ತೋಡಿದರೂ ನೀರು ಬರುವುದಿಲ್ಲ. ಕಾರಣ ಆ ಹಳ್ಳಿಗಳು ಬಂಡೆಗಳ ಮೇಲೆ ಇವೆ. ಮತ್ತು ನನ್ನ ಕ್ಷೇತ್ರದಲ್ಲಿನ ಸಾಕಷ್ಟು ಹಳ್ಳಿಗಳಲ್ಲಿ ಲೈಮ್ ಸ್ಟೋನ್ ಹೆಚ್ಚು ಇದೆ. ಅಕಸ್ಮಾತ್ ಇಲ್ಲಿ ಬಾವಿಗಳಲ್ಲಿ ನೀರು ಬಂದರೂ ಗಡಸು ನೀರು ಬಂದು ಅದು ಬಟ್ಟೆ ಒಗೆಯಲೂ ಕೂಡ ಯೋಗ್ಯವಾಗಿರುವುದಿಲ್ಲ. ಇಂತಹ ಕಡೆ ಬಾವಿ ತೋಡಿದರೆ ಸಮಾಧಾನವಾಗುತ್ತದೆಯೇ ? ಹಿಂದೆ ಇದೇ ಖಾತೆಯನ್ನು ನಿರ್ವಹಿಸಿಕೊಂಡಿದ್ದ ಸಚಿವರಿಗೆ ಇದೇ ಪ್ರಶ್ನೆಯನ್ನು ಹಾಕಿ ಏನೇ ನೀರು ಬಂದಾಗ ಕುಡಿಯುವ ನೀರಿನ ಸರಬರಾಜಿಗೆ ಕೊಳವೆ ಬಾವಿ ಯೋಜನೆ ಸೂಕ್ತವಲ್ಲವೆಂದು ತಿಳಿದು, ಈ ಗ್ರಾಮಗಳಿಗೆ ಎನ್‌ಆರ್‌ಡಬ್ಲ್ಯೂಎಸ್, ಎಆರ್‌ಡಬ್ಲ್ಯೂಎಸ್ ಅಡಿಯಲ್ಲಿ ಸೇರಿಸಿ ಕೊಡುತ್ತೇವೆ ಎಂದು ಹೇಳಿದ್ದರು. ಈ ಬಗ್ಗೆ ಮಾನ್ಯ ಮಂತ್ರಿಗಳು ಏನಾದರೂ ಕಾರ್ಯಕ್ರಮ ಹಾಕಿಕೊಳ್ಳುತ್ತಾರೆಯೇ ?

ಶ್ರೀ ಬಿ. ಬಸವಲಿಂಗಪ್ಪ : ಐದು ಹಳ್ಳಿಗಳ ಹೆಸರನ್ನು ನಾನು ಹೇಳಿದ್ದೇನೆ.

ಶ್ರೀ ಟಿ. ಬಿ. ಜಯಚಂದ್ರ : ಹೇಳಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಆಯಿತು ಹೇಳುತ್ತೇನೆ. ಆ ಐದು ಗ್ರಾಮಗಳು ಎಂದರೆ (೧) ಕೆಂಚಗಾನಹಳ್ಳಿ (೨) ಲಕ್ಕನಹಳ್ಳಿ (೩) ಮುದ್ದಿನಪಾಳ್ಯ (೪) ಚಿಟ್ಟಗಾನಹಳ್ಳಿ (೫) ಬುಕ್ಕಾಪಟ್ಟಣ ಹೋಬಳಿಯ ಬೂತಪ್ಪನಗುಡಿ. ನೀರನ್ನು ಒದಗಿಸುವುದು ಸರ್ಕಾರದ ಕರ್ತವ್ಯ. ಅಲ್ಲಿನ ಅವಶ್ಯಕತೆಗಳನ್ನು ನಾವು ಪರಿಗಣಿಸಿದ್ದೇವೆ. ಹೆಚ್ಚಿನ ಕೊಳವೆ ಬಾವಿಗಳನ್ನು ಕೊಡುವ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ತಾವು ಇನ್ನೂ ಹೆಚ್ಚುವರಿ ಬೇಕೆಂದು ನಮ್ಮ ಗಮನಕ್ಕೆ ತಂದರೆ ನಾವು ಅದನ್ನು ಮಾಡುತ್ತೇವೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು : ಈಗ ಮಲ್ಲಾರಿಗೌಡರ ಮುಂದಿನ ಪ್ರಶ್ನೆ.

ಶ್ರೀ ಟಿ. ಬಿ. ಜಯಚಂದ್ರ : ತಾವು ಹೇಳಿರತಕ್ಕಂಥಾ ಹಳ್ಳಿಗಳು ಯಾವುವು ಇವೆ, ಅವು ಪ್ರಾಬ್ಲಮ್ಯಾಟಿಕ್ ವಿಲೇಜಿಸ್ ಅಲ್ಲವೇ ಅಲ್ಲ.

ಅಧ್ಯಕ್ಷರು : ಬರೆದು ಕಳಿಸಿ.

ಶ್ರೀ ಎಂ. ಎಸ್. ಪಾಟೀಲ್ : ನನ್ನ ಪ್ರಶ್ನೆಗೆ ಯೋಚನೆ ಮಾಡಿಲ್ಲವೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಹೇಳುತ್ತಿರುವಂಥಾದ್ದು ಪ್ರಾಬ್ಲಮ್ಯಾಟಿಕ್ ವಿಲೇಜಿಸ್ ಅಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಅಲ್ಲಿ ನೀರು ಚೆನ್ನಾಗಿದೆ. ಪ್ರಾಬ್ಲಮ್ಯಾಟಿಕ್ ವಿಲೇಜಿಸ್ ಬೇರೆ ಎಂದು ಸದಸ್ಯರು ಹೇಳುತ್ತಿದ್ದಾರೆ. ತಾವು ಬರೆದು ಕಳಿಸಿ ಎಂದು ಹೇಳುತ್ತಿದ್ದೀರಿ. ನಮ್ಮ ರಕ್ಷಣೆಗೆ ತಾವು ಬರಬೇಕು.

ಶ್ರೀ ಬಿ. ಬಸವಲಿಂಗಪ್ಪ : ನಾನು ಆ ಹಳ್ಳಿಗಳನ್ನು ನೋಡಿಲ್ಲ.

ಅಧ್ಯಕ್ಷರು : ನಿಮ್ಮ ಪ್ರೊಟೆಕ್ಷನಗೆ ಬರುವುದಕ್ಕೆ ದು ಮಾನ್ಯ ಎಂ. ಎಸ್. ಪಾಟೀಲ್ ರವರನ್ನು ಕುಳಿತುಕೊಳ್ಳಿ ಎಂದು ಹೇಳಿದೆ. ನಾನು ಅವರನ್ನು ಮೊದಲೇ ಕರೆಸಿದ್ದೆ.

ಶ್ರೀ ಟಿ. ಬಿ. ಜಯಚಂದ್ರ : ಈಗ ಮಾನ್ಯ ಮಂತ್ರಿಗಳು ಯಾವ್ಯಾವ ಹಳ್ಳಿಗಳು ಎಂದು ಹೇಳಿ ಪಟ್ಟಿಯನ್ನು ಮಾಡಿ ಕೊಟ್ಟಿದ್ದಾರೆ ಅದು ತಪ್ಪು ಸತ್ಯಕ್ಕೆ ದೂರವಾದದ್ದು. ತಾವು ಹೇಳಿದ ರೀತಿಯಲ್ಲಿ ಹಳ್ಳಿಗಳ ಪಟ್ಟಿಯನ್ನು ನಾನು ಕೊಡುತ್ತೇನೆ ಈ ಸಲಹೆಯನ್ನು ಎನ್‌ಆರ್‌ಡಬ್ಲ್ಯು ಎಸ್‌ಎಆರ್‌ಡಬ್ಲ್ಯು ಎಸ್‌ನಲ್ಲಿ ಜಾರಿ ಕೊಡತಕ್ಕಂತಹ ಪ್ರಾವಿಜನ್‌ಅನ್ನು ಮಾಡುತ್ತೇವೆಂದು ಅಷ್ಯೂರೆನ್ಸ್ ಅನ್ನು ಕೊಟ್ಟರೆ ನಾನು ಕೊಡುತ್ತೇನೆ

ಶ್ರೀ ಬಿ. ಬಸವಲಿಂಗಪ್ಪ : ನಾನು ಹೇಳಿದ್ದೇನೆ. ತಾವು ಈ ಸದನದಲ್ಲಿ ಈಗ ಹೇಳಿದ್ದೀರಿ. ನನ್ನ ಹತ್ತಿರ ಬಂದು ಆ ಪಟ್ಟಿಯನ್ನು ಕೊಡಿ ಕ್ರಮ ತೆಗೆದುಕೊಳ್ಳುತ್ತೇನೆ. ಎಲ್ಲೆಲ್ಲಿ ಪ್ರಾಬ್ಲಮ್ಯಾಟಿಕ್ ವಿಲೇಜಿಸ್ ಇದೆ ಎಂದು ನಾನು ಹೇಳಿದ್ದೇನೆ. ಇದು ಸುಳ್ಳಾಗಿದ್ದರೆ ಯಾರು ಈ ಸುಳ್ಳು ವರದಿಯನ್ನು ಕೊಟ್ಟಿದ್ದಾರೆ. ಅವರ ಬಗ್ಗೆ ನಾನು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಏಕಾಂತಯ್ಯ : ವ್ಯವಸ್ಥಿತವಾಗಿ ಅಧಿಕಾರಿಗಳಿಂದ ಇವರಿಗೆ ವಿರುದ್ಧ ಇರುವುದು ಇದರಿಂದ ಕಂಡು ಬರುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದುವರೆಗೆ ಆ ಕಡೆ ಮತ್ತು ಈ ಕಡೆಯ ಜುನಾಯಿತ ಸದಸ್ಯರು ಮಾತ್ರ ನಿಮ್ಮನ್ನು ಪ್ರತಿಭಟನೆ ಮಾಡುತ್ತಿದ್ದರು. ವಿರೋಧ ಮಾಡುತ್ತಿದ್ದರು. ಈಗ ನಿಮ್ಮ ಅಧಿಕಾರಿಗಳೂ ತಪ್ಪು ಮಾಹಿತಿ ಕೊಟ್ಟು ನಿಮಗೆ ವಿರೋಧವನ್ನು ವ್ಯಕ್ತಪಡಿಸುತ್ತಿದ್ದಾರೆ. ಇದರ ಬಗ್ಗೆ ತಾವು ತುಂಬಾ ಜಾಗೃತರಾಗಿರುವುದು ಒಳ್ಳೆಯದು.

ವಿಷಯ : ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ ನಾಮಕರಣ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ – ೨೦೦ (೬೯೭)

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡದ ಕೃಷಿ ವಿಶ್ವವಿದ್ಯಾನಿಲಯಕ್ಕೆ "ಜವಾಹರಲಾಲ ನೆಹರು ಕೃಷಿ ವಿಶ್ವವಿದ್ಯಾನಿಲಯ" ಎಂದು ನಾಮಕರಣ ಮಾಡಲು ಸರ್ಕಾರಕ್ಕಿರುವ ತೊಂದರೆ ಏನು ?

ಆ) ಕೃಷಿ ವಿಶ್ವವಿದ್ಯಾನಿಲಯಕ್ಕೆ ಕೊಡಬೇಕಾಗಿದ್ದ ಹಣವನ್ನು ನಿಗಧಿತ ವೇಳೆಯಲ್ಲಿ ಕೊಡಲು ಸರ್ಕಾರಕ್ಕಿರುವ ತೊಂದರೆ ಏನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಈ ವಿಷಯ ಸರ್ಕಾರದ ಮುಂದೆ ಇಲ್ಲ

ಆ) ಸಾಧ್ಯವಾದ ಮಟ್ಟಿಗೆ ಅನುದಾನವನ್ನು ಕಾಲಕಾಲಕ್ಕೆ ಬಿಡುಗಡೆ ಮಾಡಲಾಗುತ್ತಿದೆ.

ಶ್ರೀ ಎಂ. ಎಸ್. ಪಾಟೀಲ : ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಜವಾಹರಲಾಲ್ ನೆಹರೂರವರ ಹೆಸರನ್ನು ಇಡುವ ಬಗ್ಗೆ ಸರಕಾರದ ಮುಂದಿದೆಯೇ, ಎಂದು ಕೇಳಿದ್ದಕ್ಕೆ ಅದು ಸರಕಾರದ ಮುಂದಿಲ್ಲವೆಂದು ಹೇಳುತ್ತಾರೆ ನಾನು ಕೇಳಿದ ಪ್ರಶ್ನೆ ಬೇರೆ. ಅವರು ಕೊಟ್ಟಿರುವ ಉತ್ತರ ಬೇರೆ. ಇದಕ್ಕೆ ಏನು ತೊಂದರೆ ಇದೆ ಎಂದು ನಾನು ಕೇಳಿದ್ದೇನೆ. ಅದಕ್ಕೆ ಇದು ಸರಕಾರದ ಮುಂದಿಲ್ಲವೆಂದು ಹೇಳಿದ್ದಾರೆ. ಭಾರತದ ಪ್ರಥಮ ಪ್ರಧಾನಿ ನೆಹರೂಜಿಯವರ ಹೆಸರನ್ನು ಕೃಷಿ ವಿಶ್ವವಿದ್ಯಾನಿಲಯಕ್ಕೆ ಇಡಲು ಏನು ತೊಂದರೆ ಇದೆ. ಇದರ ಬಗ್ಗೆ ನಾನು ಸಲ ರೆಸಲ್ಯೂಷನ್ ಅನ್ನು ಮಾಡಿ ಮೂವ್ ಮಾಡಿದ್ದೇವೆ. ಸರಕಾರಕ್ಕೆ ಪತ್ರವ್ಯವಹಾರ ಮಾಡಿದ್ದೇನೆ. ಸರಕಾರ ಈಗಲಾದರೂ ಮುಂದಾಗಿ ಕೃಷಿ ವಿಶ್ವವಿದ್ಯಾನಿಲಯಕ್ಕೆ ನೆಹರೂಜಿಯವರ ಹೆಸರನ್ನು ಇಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ : ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ನೆಹರೂಜಿಯವರ ಹೆಸರನ್ನು ಇಡಬೇಕೆಂದು ಈಗ ತಾನೆ ಸಲಹೆಯನ್ನು ಕೊಟ್ಟಿದ್ದಾರೆ.